ಮೂರು ವರ್ಷಗಳ ನಂತರ ಮೇಘನಾ ಗಾಂವ್ಕರ್ ಹಿರಿತೆರೆಗೆ ಮರಳಿದ್ದಾರೆ. ಐದು ವರ್ಷಗಳಲ್ಲಿ ಮುಗಿದುಹೋಗುವ ನಟಿ ನಾನಲ್ಲ, ಸಾಯುವವರೆಗೂ ನಟಿಸುತ್ತಲೇ ಇರುತ್ತೇನೆ ಎಂದು ದಿಟ್ಟವಾಗಿ ನುಡಿಯುವ ಮೇಘನಾ, ನಾಯಕಿಯಾಗಿ ನಟಿಸಿರುವ 'ಕಾಳಿದಾಸ ಕನ್ನಡ ಮೇಷ್ಟ್ರು' ಚಿತ್ರಮಂದಿರಗಳ ಕದ ತಟ್ಟುತ್ತಿದೆ.

■ ಪದ್ಮನಾಭ ಭಟ್

# ಬಂದೇ ಬರುತಾದ ಕಾಲ



ಅದು ಶಾಲೆ ಆರಂಭವಾದ ಮೊದಲ ದಿನ. ಎಲ್ಲ ವಿದ್ಯಾರ್ಥಿಗಳೂ ತಮ್ಮ ಹೆಸರು ಹೇಳಿಕೊಳ್ಳುವುದರ ಜೊತೆಗೆ ಬದುಕಿನಲ್ಲಿ ತಾವು ಏನಾಗಬೇಕು ಎಂದು ಅಂದುಕೊಂಡಿದ್ದೇವೆ ಎನ್ನುವುದನ್ನೂ ಹೇಳಿಕೊಳ್ಳುತ್ತಿದ್ದರು. ಆ ಹುಡುಗಿಯ ಗುರಿ ಮಾತ್ರ ಉಳಿದೆಲ್ಲವರಿಗಿಂತ ಭಿನ್ನವಾಗಿತ್ತು. ಅವಳು ಅಂದುಕೊಂಡಿದ್ದು ಸಿನಿಮಾ ಡೈರೆಕ್ಟರ್ ಆಗಬೇಕು ಎಂದು! ಅವಳ ಹೆಸರು ಮೇಘನಾ ಗಾಂವ್ಕರ್.

ಆದರೆ ಚಿಕ್ಕಂದಿನಲ್ಲಿ ಆಸೆಪಟ್ಟ ಹಾಗೆ ಮೇಘನಾ ನಿರ್ದೇಶಕಿ ಆಗಲಿಲ್ಲ. ಬದಲಿಗೆ ನಟಿಯಾಗಿ ಚಂದನವನದಲ್ಲಿ ಹೆಜ್ಜೆಯಿಟ್ಟರು. ಮೀನ ಮೈ ಹೊಳಪಿನಂಥ ಕಣ್ಣುಗಳ ಈ ಚೆಲುವೆ ಚಂದನವನಕ್ಕೆ ಬಂದಿದ್ದು 2010ರಲ್ಲಿ. ಹೆಸರು ಮಾಡಿದ್ದು 'ಚಾರ್‌ಮಿನಾರ್' ಸಿನಿಮಾದಿಂದ.

ಕಳೆದ ಮೂರು ವರ್ಷಗಳಿಂದ ಮೇಘನಾ ನಟಿಸಿರುವ ಯಾವ ಸಿನಿಮಾವೂ ತೆರೆಕಂಡಿಲ್ಲ. 2016ರಲ್ಲಿ ತೆರೆಕಂಡ 'ಸಿಂಪಲ್ಲಾಗ್ ಇನ್ನೊಂದ್ ಲವ್ ಸ್ಟೋರಿ' ಕೂಡ ಭಾರಿ ಸದ್ದನ್ನೇನೂ ಮಾಡಲಿಲ್ಲ. ಈಗ 'ಕಾಳಿದಾಸ ಕನ್ನಡ ಮೇಷ್ಟ್ರ' ಇಂಗ್ಲಿಷ್ ಪ್ರಿಯ ಪತ್ನಿಯಾಗಿ ತೆರೆಯ ಮೇಲೆ ರಾರಾಜಿಸುವುದಕ್ಕೆ ರೆಡಿಯಾಗಿದ್ದಾರೆ. ಕವಿರಾಜ್ ಅವರ ನಿರ್ದೇಶನದ ಎರಡನೇ ಸಿನಿಮಾ 'ಕಾಳಿದಾಸ ಕನ್ನಡ ಮೇಷ್ಟ್ರು'. ಕನ್ನಡ ಮೇಷ್ಟ್ರಾಗಿ ಜಗ್ಗೇಶ್ ನಟಿಸುತ್ತಿದ್ದಾರೆ.

'ನನಗೆ ನಮ್ಮ ಕನ್ನಡ ಭಾಷೆಯ ಮಹತ್ವ ಅರಿವಾಗಿದ್ದು ಚಿತ್ರರಂಗಕ್ಕೆ ಬಂದ ಮೇಲೆಯೇ. ನಾನು ಓದಿದ ಬೋರ್ಡಿಂಗ್ ಸ್ಕೂಲಲ್ಲಿ ಇಂಗ್ಲಿಷಲ್ಲೇ ಮಾತಾಡಬೇಕು ಎಂಬ ಕಡ್ಡಾಯ ನಿಯಮವಿತ್ತು. ನಂತರ ಇಂಗ್ಲಿಷ್ ಸಾಹಿತ್ಯದಲ್ಲಿಯೇ ಎಂ.ಎ. ಮಾಡಿದೆ. ಕನ್ನಡತಿಯೇ ಆಗಿದ್ದರೂ ಕನ್ನಡದ ಬಗ್ಗೆ ಅಷ್ಟೊಂದು ತಿಳಿದುಕೊಂಡಿರಲಿಲ್ಲ. ಆದರೆ ಚಿತ್ರರಂಗಕ್ಕೆ ಬಂದಮೇಲೆ ಕನ್ನಡದ ಸೊಬಗು, ಮಹತ್ವ ಅರಿವಾಗುತ್ತ ಹೋಯಿತು. ಈಗಲೂ ನನಗೆ ಇಂಗ್ಲಿಷ್ ಸಾಹಿತ್ಯ ಇಷ್ಟ. ಆದರೆ ಕನ್ನಡದ ಬಗ್ಗೆಯೂ ಸಾಕಷ್ಟು ಪ್ರೀತಿ, ಗೌರವ ಇದೆ. ಈ ಚಿತ್ರದ ನಾಯಕಿಯೂ ಹೀಗೆ ಇಂಗ್ಲಿಷ್ ಪ್ರಿಯೆ' ಎಂದು ಮೇಘನಾ ವಿವರಿಸುತ್ತಾರೆ.

ಮೂರು ವರ್ಷಗಳ ಹಿರಿತೆರೆಯ ಅಜ್ಞಾತವಾಸ ಮೇಘನಾ ಅವರನ್ನು ಕೆಲವೊಮ್ಮೆ ಕಂಗೆಡಿಸಿದ್ದಿದೆಯಂತೆ. 'ನಾನು ಹಟಮಾರಿ. ಒಳ್ಳೆಯ ಸಿನಿಮಾಗಳನ್ನೇ ಮಾಡುತ್ತೇನೆ ಎಂದು ಹಟ ಹಿಡಿದಿದ್ದೆ. ಮನಸಿಗೆ ಒಪ್ಪಿಗೆ ಆಗುವ ಅವಕಾಶಗಳು ಬರುತ್ತಿರಲಿಲ್ಲ. ಕೆಲವೊಮ್ಮೆ ನನಗೆ ಒಳ್ಳೆಯ ಅವಕಾಶಗಳು ಸಿಗುವುದೇ ಇಲ್ಲವೇ? ಬೇರೆ ಏನಾದರೂ ಮಾಡಲಾ ಎಂದೆಲ್ಲ ಯೋಚನೆ ಬಂದಿದ್ದಿದೆ. ಆದರೆ ಸಿನಿಮಾಪ್ರೀತಿ ನನ್ನನ್ನು ಎಲ್ಲಿಗೂ ಹೋಗಗೊಡಲಿಲ್ಲ. ನನಗೂ ಒಳ್ಳೆಯ ಅವಕಾಶಗಳು ಸಿಕ್ಕೇ ಸಿಗುತ್ತವೆ. ಒಳ್ಳೆಯ ಕಾಲ ಬಂದೇ ಬರುತ್ತದೆ ಎಂದು ಬಲವಾಗಿ ನಂಬಿಕೊಂಡಿದ್ದೆ. ಅದು ಕಾಳಿದಾಸ ಕನ್ನಡ ಮೇಷ್ಟ್ರು ಸಿನಿಮಾದ ಮೂಲಕ ಬಂದಿದೆ' ಎಂದು ನಿರಾಳ ಉಸಿರುಬಿಡುತ್ತಾರೆ ಮೇಘನಾ.

ಈ ಚಿತ್ರದ ನಂತರ ಹೊಸಬರ ತಂಡದೊಂದಿಗೆ ಅವರು ಒಂದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾವನ್ನೂ ಒಪ್ಪಿಕೊಂಡಿದ್ದಾರೆ. ಸಿದ್ಧಾರ್ಥ್ ಮಾಧ್ಯಮಿಕ ನಾಯಕನಾಗಿ ನಟಿಸಿರುವ ಈ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಆದರೆ ಶೀರ್ಷಿಕೆ ಅಂತಿಮಗೊಂಡಿಲ್ಲ.

ನಟನೆಯ ಜೊತೆಗೆ ನಿರ್ದೇಶಕಿಯಾಗಬೇಕು, ನಿರ್ಮಾಪಕಿಯಾಗಬೇಕು ಎಂಬ ಜೋಡಿ ಆಸೆಗಳೂ ಮೇಘನಾ ಮನಸಲ್ಲಿ ಇವೆ. ಇದರ ಜೊತೆಗೇ 'ಡಾಕ್ಟರ್' ಆಗುವ ಕನಸಿನ ಬೆನ್ನನ್ನೂ ಅವರು ಹತ್ತಿದ್ದಾರೆ. ಮುಂಬೈ ವಿಶ್ವವಿದ್ಯಾಲಯದಲ್ಲಿ 'ಸಾಹಿತ್ಯ ಮತ್ತು ಸಿನಿಮಾ' ಎಂಬ ವಿಷಯದ ಮೇಲೆ ಪಿಎಚ್.ಡಿ ಮಾಡುತ್ತಿದ್ದಾರೆ. ■